ರಾಜ್ಯದಲ್ಲಿ "ಬಿಸಿಯೂಟ" ಕಾರ್ಯಕ್ರಮಕ್ಕೆ ಆಹಾರ ಮತ್ತು ನಾಗರೀಕ ಇಲಾಖೆಯಿಂದ ಬಿಡುಗಡೆಯಾಗಿರುವ ಆಹಾರ ಪದಾರ್ಥಗಳ ವಿವರ ನೀಡುವ ಬಗ್ಗೆ.

4266 (4892) : ಶ್ರೀ ಯು.ಆರ್.ಸಭಾಪತಿ (ಉಡುಪಿ) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಿರುವ ಬಿಸಿಯೂಟ ಕಾರ್ಯಕ್ರಮಕ್ಕೆ ಆಹಾರ ಮತ್ತು ನಾಗರೀಕ ಇಲಾಖಾ ವತಿಯಿಂದ ಬಿಡುಗಡೆಯಾಗಿರುವ ಅಕ್ಕಿ ಬೇಳೆಕಾಳುಗಳ ವಿವರಗಳನ್ನು ನೀಡುವುದು: (ಜಿಲ್ಲಾವಾರು):

ಆ) ಈಗಾಗಲೇ ಅನೇಕ ಜಿಲ್ಲೆಗಳಲ್ಲಿ ಕಳೆದ ಹಲವಾರು ವರ್ಷಗಳಿಂದ ಅತ್ಯಂತ ಯಶಸ್ವಿಯಾಗಿ ಅಕ್ಕಿ ವಿತರಣೆ ಮಾಡಿಕೊಂಡು ಬರುತ್ತಿದ್ದ ತಾಲ್ಲೂಕು ಕೃಷಿ ಉತ್ಪಾದಕ ಮಾರ್ಕೆಟಿಂಗ್ ಸೊಸೈಟಿಗಳಿಂದ ಈ ಅಕ್ಕಿ ವಿತರಣೆ ಮುಂದುವರಿಸಲು ಸರ್ಕಾರ ಕ್ರಮ ಕೈಗೆದು ಕೊಂಡಿದೆಯೇ: ಈ ಬಗ್ಗೆ ಸರ್ಕಾರದ ನಿಲುವನ್ನು ವಿವರಿಸುವುದು?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)

ಅ) ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖಾ ವತಿಯಿಂದ ಬಿಸಿಯೂಟ ಕಾರ್ಯಕ್ರಮಕ್ಕೆ ಯಾವುದೇ ಆಹಾರ ಧಾನ್ಯಗಳನ್ನು ಬಿಡುಗಡೆ ಮಾಡುತ್ತಿಲ್ಲ. ಆದರೆ, ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಬಿಸಿಯೂಟ ಕಾರ್ಯಕ್ರಮಕ್ಕೆ ಬಿಡಿಗಡೆಯಾಗುತ್ತಿರುವ ಜಿಲ್ಲಾವಾರು ಆಹಾರ ಧಾನ್ಯಗಳ ವಿವರಗಳು ಕೆಳಕಂಡಂತಿರುತ್ತದೆ:

(ಪ್ರಮಾಣ ಕ್ವಿಂ.ಗಳಲ್ಲಿ)

ಜಿಲ್ಲೆಯ ಹೆಸರು ವಿಭಾಗವಾರು	ಬಿಡುಗಡೆ ಮಾಡಿರುವ ಆಹಾರಧಾನ್ಯಗಳು		ಬೇಳೆಕಾಳು ಗಳು
	ಗೋಧಿ	ಅಕ್ಕಿ	ತೊಗರಿಬೇಳೆ
1. ಬೆಂಗಳೂರು ನಗರ	–	87368.70	492.51
2. ಬೆಂಗಳೂರು (ಗ್ರಾ)	–	47892.60	823.15
3. ಬಾಗಲಕೋಟೆ	14645.18	29290.36	1141.00
4. ಬೆಳಗಾಂ	–	66237.90	1800.00
ಚಿಕ್ಕೋಡಿ	–	78006.00	1314.00
5. ಬಳ್ಳಾರಿ	–	59660.26	700.00
6. ಬೀದರ್	16234.31	32468.63	920.70
7. ಬಿಜಾಪುರ	20420.03	40840.07	1176.00
8. ಚಾಮರಾಜನಗರ	–	23417.70	405.00

1	2	3	4	5
9.	ಚಿಕ್ಕಮಗಳೂರು	–	31080.00	576.00
10.	ಚಿತ್ರದುರ್ಗ	–	49675.50	905.00
11.	ದಾಪಣಗೆರೆ	–	57702.60	972.00
12.	ದಕ್ಷಿಣಕನ್ನಡ	–	50116.20	860.00
13.	ಧಾರವಾಡ	–	50281.20	860.00
14.	ಗದಗ	–	32273.40	621.00
15.	ಗುಲ್ಬರ್ಗಾ	22659.19	45318.39	1183.00
	ಯಾದಗಿರಿ	12478.00	24955.63	513.00
16.	ಹಾಸನ	–	43571.10	800.00
17.	ಹಾವೇರಿ	–	53295.90	887.00
18.	ಕೊಡಗು	–	12474.90	243.50
19.	ಕೋಲಾರ	–	39543.30	1159.60
	ಚಿಕ್ಕಬಳ್ಳಾಪುರ	–	34045.50	–
20.	ಕೊಪ್ಪಳ	11667.55	23335.11	859.15
21.	ಮಂಡ್ಯ	–	42630.30	745.00
22.	ಮೈಸೂರು	–	69559.20	1045.00
23.	ರಾಯಚೂರು	16145.14	32290.28	1028.14
24.	ಶಿವಮೊಗ್ಗ	–	44071.50	804.00
25.	ತುಮಕೂರು	–	40942.50	695.00
	ಮಧುಗಿರಿ	–	30601.20	631.00
26.	ಉಡುಪಿ	–	28809.90	390.00
27.	ಉತ್ತರ ಕನ್ನಡ	–	42526.80	802.00
	ಒಟ್ಟು	1,14,249,40	13,44,282,63	25031,75

ಆ) ಬಿಸಿಯೂಟ ಯೋಜನೆಯಡಿಯಲ್ಲಿ ಆಯಾ ಜಿಲ್ಲೆಗಳಲ್ಲಿರುವ ಸಗಟು ಮಳಿಗೆದಾರರು ಅಂದರೆ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ಮತ್ತು ಟಿ.ಎ.ಪಿ.ಸಿ.ಎಂ.ಎಸ್.ಗಳು ಭಾರತ ಆಹಾರ ನಿಗಮದಿಂದ ಸಂಬಂದಿಸಿದ ಅಡಿಗೆ ಕೇಂದ್ರಕ್ಕೆ ಅಕ್ಕಿ/ ಗೋಧಿಯನ್ನು ಸರಬರಾಜು ಮಾಡುತ್ತಿದ್ದಾರೆ (ಉಡುಪಿ ಜಿಲ್ಲೆಯೊಂದನ್ನು ಹೊರತುಪಡಿಸಿ). ಆದರೆ 3 ಕೆ.ಜಿ. ಅಕ್ಕಿಯನ್ನು ಶಾಲಾ ಮಕ್ಕಳಿಗೆ ವಿತರಿಸಲು ಸಗಟು ಮಳಿಗೆದಾರರು ಭಾರತ ಆಹಾರ ನಿಗಮದಿಂದ ಎತ್ತುವಳಿ ಮಾಡಿ ನ್ಯಾಯ ಬೆಲೆ ಅಂಗಡಿಗಳಿಗೆ ಸರಬರಾಜು ಮಾಡಿ ಆ ಮೂಲಕ ಶಾಲಾ ಮಕ್ಕಳಿಗೆ ವಿತರಣೆ ಮಾಡಲಾಗುತ್ತಿದೆ.